International Journal of Kannada Research
www.kannadajournal.com

ISSN: 2454–5813
IJKR 2024; 10(4): 88-92
© 2024 IJKR
www.kannadajournal.com
Received: 15-08-2024
Accepted: 18-09-2024

**Dr. Sanjeev R Nayak**
MA. Mphil. Ph.D. DGs Asso-Professor, K.L.E. Society.s G. H. College, Haveri, Karnataka, India

**Corresponding Author:**
**Dr. Sanjeev R Nayak**
MA. Mphil. Ph.D. DGs Asso-Professor, K.L.E. Society.s G. H. College, Haveri, Karnataka, India

# ಪ್ರದರ್ಶನ ಕಲೆಗಳು

**Sanjeev R Nayak**

### ಪೀಠಿಕೆ

ರಂಗ ಭೂಮಿಯಲ್ಲಿ ಅಥವಾ ವೇದಿಕೆಯಲ್ಲಿ ಪ್ರದರ್ಶನವಾಗುವ ರಂಗಭೂಮಿ ಕಲೆ, ವಿವಿಧ ಮನರಂಜನೆ ಸಂಧರ್ಭಗಳಲ್ಲಿ ಕಂಡುಬರುವ ಸಂಕೀರ್ಣ ಪ್ರದರ್ಶನ ಕಲೆ, ಶಕ್ತಿ ಪ್ರದರ್ಶನ ಕಲೆಗಳನ್ನು ಪ್ರದರ್ಶನ ಕಲೆಗಳೆಂದು ಹೇಳಬಹುದು, ಮೊದಲೆನೇಯದಾಗಿ ಬಹುತೇಕ ಜಿಲ್ಲೆಯಲ್ಲಿ ಕಂಡು ಬರುವ ಪ್ರಮುಖ ಜನಪದ ಕಲೆಗಳಾದ ಯಕ್ಷಗಾನ,ತಾಳ ಮದ್ದಲೆ (ಕರವಾಳಿ ಜಿಲ್ಲೆಗೆ ಮಾತ್ರ ಸೀಮಿತ), ಸೂತ್ರದ ಗೊಂಬೆಯಾಟ, ತೊಗಲು ಗೊಂಬೆಯಾಟ, ದೊಡ್ಡಾಟ, ಸಣ್ಣಾಟ, ಮೂಡಲಪಾಯ ಬಯಲಾಟಗಳನ್ನು ಜಾತ್ರೆ,ಹಬ್ಬ,ವಿಶೇಷ ದಿನಗಳಲ್ಲಿ ನಡೆಯವದನ್ನು ನೋಡಬಹುದು.ಅವುಗಳಲ್ಲಿ ಪ್ರಮುಖವಾಗಿ ನನ್ನ ಕ್ಷೇತ್ರ ಕಾರ್ಯದಲ್ಲಿ ಕಲೆ ಹಾಕಿರುವ ಉತ್ತರ ಕನ್ನಡ ಜಿಲ್ಲೆ ಮತ್ತು ಇನ್ನಿತರ ಪ್ರದಶೇಗಳ ಪ್ರಮುಖ ಜನಪದ ರಂಗಭೂಮಿ ಕಲೆಗಳನ್ನು ದಾಖಲಿಸಿರುತ್ತೇನೆ.ಅವುಗಳಲ್ಲಿ ಪ್ರಮುಖವಾಗಿ

### ಯಕ್ಷಗಾನ

ಯಕ್ಷಗಾನವೆಂಬುದು ಒಂದು ಜಾನಪದ ಸಮ್ಮಿಶ್ರ ಕಲೆ ಉತ್ತರ ಕನ್ನಡ ಜಿಲ್ಲೆಯ ಬಹು ಪ್ರಮುಖ ಕಲೆಯಾದ ಯಕ್ಷಗಾನ ಬಯಲಾಟ ಜನಪದ ಕಲೆಗಳಲ್ಲಿ ಇದು ಕೂಡ ಜನಪ್ರಿಯವಾದುದಾಗಿದು. ರಂಗಭೂಮಿಯಲ್ಲಿ ಪ್ರದರ್ಶಿಸಲ್ಪಡುವ ಪ್ರದರ್ಶನದ ಕಲೆಯಾಗಿದೆ. ಇದು ನೃತ್ಯ, ಅಭಿನಯ ಸಾಹಿತ್ಯ ಸಂಭಾಷಣೆ, ಸಂಗೀತಗಳೆಲ್ಲವೂ ಒಂದಡೆ ಸೇರಿರುವ ಕಲೆ. ಇಲ್ಲಿ ವಾದ್ಯದ ಜೊತೆಗೆ ವೇಷಭೂಷಣಗಳೇ ಪ್ರಧಾನ. ಇದು ಕರ್ನಾಟಕದ ಬೇರೆ ಭಾಗಗಳಲ್ಲಿ ಬೈಲ್ಕತೆ, ಪ್ರಸಂಗ, ಮೇಳ, ಅಟ್ಟದಾಟ ಮುಂತಾದ ಬೇರೆ ಬೇರೆ ಹೆಸರುಗಳಿಂದ ಕರೆಯುತ್ತಾರೆ. ''ಶುದ್ದ ಶಾಸ್ತ್ರೀಯ ಸಂಗೀತವನ್ನು ದೇವಗಾನ,ಗಂಧರ್ವಗಾನ ಎನ್ನುವಂತೆ, ಅಂದೊಂದು ಜಾನಪದ ವೈಶಿಷ್ಟ್ಯವುಳ್ಳದನ್ನು ''ಯಕ್ಷಗಾನ'' ಎಂದಿರಬೇಕೆನಿಸುತ್ತದೆ'' [೧] ಯಕ್ಷಗಾನದಲ್ಲಿ ಭಾಗವತನೇ ಮುಖ್ಯ ಪಾತ್ರಧಾರಿ. ಆತ ಸೂತ್ರಧಾರನಾಗಿ ಕಾರ್ಯನಿರ್ವಹಿಸುತ್ತಾನೆ. ಕಥಾನಾಯಕ ಕೇವಲ ವೇಷಧಾರಿಯಷ್ಟೆ. ಅಂತೆಯೇ ಬಯಲಾಟದ ಪ್ರದರ್ಶನವು ಬಹಳ ದೊಡ್ಡದಾದುದಾಗಿದ್ದು ಹೆಚ್ಚು ಸಮಯ ತೆಗೆದುಕೊಳ್ಳುತ್ತಿದ್ದುದರಿಂದ ಪ್ರೇಕ್ಷಕರು ದೀರ್ಘಕಾಲ ಕುಳಿತು ನೋಡುವುದು ಕಷ್ಟ ಎಂಬ ದೃಷ್ಟಿಯಿಂದ ಕಡಿಮೆ ಅವಧಿಯಲ್ಲಿ ಮುಗಿಸುವ ಸಣ್ಣಾಟ ಬಳಕೆಗೆ ತಂದರು. ದೈವಾರಾಧನೆ ಮತ್ತು ಮನರಂಜನೆಯ ಹಿನ್ನೆಲೆಯಲ್ಲಿಯೇ ಈ ಕಲೆ ಬೆಳಕಿಗೆ ಬಂದ ರಾಮಾಯಣ, ಮಹಾಭಾರತ, ಭಾಗವತ ಪುರಾಣಗಳ ವಸ್ತುವಿಷಯದ ಪ್ರಸಂಗಗಳನ್ನೇ ಕಥಾ ವಸ್ತುವಾಗಿ ಸ್ವೀಕರಿಸುತ್ತೆವೆ. ಈ ಕಲೆಗೆ ಪ್ರದರ್ಶನಗೊಳ್ಳುವಾಗ ಭಾಗವತ, ಮದ್ದಲೆ, ಮುಖವೀಣೆಯರು ಹಾಡುತ್ತಾ ತಾಳ ಹಾಕುತ್ತಾ ಹಿಮ್ಮೇಳನದಲ್ಲಿದ್ದು ಹಾಡುಗಳನ್ನು ಹಾಡುತ್ತಿರಲು ಪಾತ್ರಧಾರಿಗಳು ಸಂಭಾಷಣೆಯ ಮಾತನ್ನಾಡುತ್ತಾ ತಾಳಕ್ಕೆ ತಕ್ಕಂತೆ ಕುಣಿಯುತ್ತಾರೆ.

ಉತ್ತರ ಕನ್ನಡ ಜಿಲ್ಲೆಯ ಪ್ರಮುಖ ಜಾತ್ರೆಗಳಲ್ಲಿ ಈ ಯಕ್ಷಗಾನ ಕಂಡು ಬರುತ್ತದೆ. ಅಂಕೋಲೆಯ ವೆಂಕಟ್ರಮಣ ರಥೋತ್ಸವದಲ್ಲಿ ಜಾತ್ರೆಯಲ್ಲಿ ಒಂದು ತಿಂಗಳವರಗೆ ಹರಕೆ ಆಟ (ಯಕ್ಷಾಗನವನ್ನು ಈ ಪ್ರದೇಶದಲ್ಲಿ ''ಆಟ'' ಎಂದು ಕರೆಯಲಾಗುತ್ತದೆ)ನೆಡಯತ್ತದೆ. ''ಇತರ ಪ್ರಾಂತಗಳಲ್ಲಿಯೂ ಪ್ರಚಲಿತವಿರುವ ಈ ಕಲೆಗೆ ಆಂಧ್ರ ದೇಶದ ವಿಧಿನಾಟಕ,ಕೇರಳದ ಕಥಕ್ಕಳಿ,ತಮಿಳುನಾಡಿನ ತೆರುಕ್ಕೂತ್ತು ಹಾಗೂ ಉತ್ತರ ದೇಶಗಳಲ್ಲಿ ರಾಮಲೀಲಾ ಇತ್ಯಾದಿ ರೂಪಗಳು ಯಕ್ಷಗಾನವನ್ನು ಹೋಲುವ ರೂಪಗಳಾಗಿವೆ.''[೨]ಆದರೆ ಕರ್ನಾಟಕದ ಈ ಯಕ್ಷಗಾನವು ಪ್ರಾದೇಶೀಕವಾಗಿ ಕಂಡು ಬರುತ್ತದೆ. ದಕ್ಷಿಣ ಕರ್ನಾಟಕದ ಭಾಗದಲ್ಲಿ ಪ್ರದರ್ಶಿಸಲ್ಪಡುವ ಬಯಲಾಟಕ್ಕೆ ಮೂಡಲಪಾಯವೆಂದೂ. ದಕ್ಷಿಣ ಮತ್ತು ಉತ್ತರ ಕನ್ನಡ ಜಿಲ್ಲೆಯ ಭಾಗದಲ್ಲಿ ಪ್ರದರ್ಶಿಸಲ್ಪಡುವ ಬಯಲಾಟಕ್ಕೆ ಪಡುವಲಪಾಯ ಎಂದೂ ಕರೆಯಲಾಗಿದೆ. ಈ ಪಡುವಲಪಯದ ಬಯಲಾಟದಲ್ಲಿಯೇ ತೆಂಕಣತಿಟ್ಟು ಮತ್ತು ಬಡಗಣತಿಟ್ಟು ಎಂಬ ಪ್ರಭೇದಗಳು ಕಂಡುಬರುವಂತೆಯೇ ಮೂಡಲಪಾಯದ ಬಯಲಾಟದಲ್ಲಿಯೂ ಉತ್ತರ ಸಂಪ್ರದಾಯ ಮತ್ತು ದಕ್ಷಿಣ ಸಂಪ್ರದಾಯವನ್ನು ದೊಡ್ಡಾಟ ಎಂದು ಕರೆಯುವ ಸಂಪ್ರದಾಯವಿದ್ದರೆ., ದಕ್ಷಿಣ ಸಂಪ್ರದಾಯದ ಆಟಗಳನ್ನು ಅಟ್ಟದಾಟ, ಬಯಲಾಟ, ಮೇಳ, ಯಕ್ಷಗಾನ ಎಂಬ ಹಲವು ಹೆಸರುಗಳಲ್ಲಿ ಕರೆಯುತ್ತಾರೆ

**ತಾಳ ಮದ್ದಲೆ**

ತಾಳ ಮದ್ದಲೆ ವಿಶೇಷವಾಗಿ ಮಳೆಗಾಲದಲ್ಲಿ ನೆಡೆಯವ ಹೆಚ್ಚಿನ ಶ್ರಮ ಮತ್ತು ಹಣದ ಖರ್ಚುಯಿಲ್ಲದೇ ಮಾಡುವ ಕಲೆಯಾಗಿದೆ. ವೇಷಭೂಷಣ ನರ್ತನಗಳಿಲ್ಲದೆಯೇ ಕುಳಿತಲ್ಲಿಯೇ ಯಕ್ಷಗಾನ ಕಥಾಪ್ರಸಂಗವನ್ನು ನಡೆಸಿಕೊಡುವ ಸಂಪ್ರದಾಯವೇ ತಾಳಮದ್ದಳೆ. ಅಂದರೆ ಕುಳಿತಲ್ಲಿಯೇ ಭಾಗವತನು ಶ್ರುತಿ,ರಾಗ, ತಾಳಗಳಿಗೆ ಬದ್ಧನಾಗಿ ಯಕ್ಷಗಾನದ ಪದಗಳನ್ನು ಹಾಡುತ್ತಿದ್ದರೆ. ಆತಾಳಕ್ಕೆ ಸರಿಯಾಗಿ ಮದ್ದಳೆಗಾರ ಮದ್ದಳೆ ಬಾರಿಸುತ್ತಾನೆ. ಈ ದೃಷ್ಟಿಯಿಂದ ಇದಕ್ಕೆ ತಾಳ ಮದ್ದಳೆ ಎಂಬ ಹೆಸರು ಬಂದಿದೆ. ''ಈ ಕಲೆಯಲ್ಲಿ ಪ್ರಧಾನವಾಗಿ ಪುರಾಣ ಕಥೆಗಳನ್ನು ಹೇಳುವುದರಿಂದ, ಕೇಳುವುದರಿಂದ ಪುಣ್ಯ ಪ್ರಾಪ್ತಿಯಾಗಿ. ಇಷ್ಟಾರ್ಥ ಸಿದ್ಧಿಯಾಗುವುದೆಂಬ ನಂಬಿಕೆಯ ಹಿನ್ನೆಲೆಯಲ್ಲಿ ಈ ಕಲೆ ತನ್ನ ಅಸ್ಥಿತ್ವ ಉಳಿಸಿಕೊಂಡಿದೆ''. ಮಾಹಿತಿ- ಬೊಮ್ಮುಯ.ಗಾಂವಕರ, ವಯಸ್ಸು-೫೦, ಜಾತಿ-ಡವ, ಭಾಗವಂತರು, ಹಿತ್ತಲಮಕ್ಕಿ, ಗೋಕರ್ಣ,ಕುಮಾಟ. (ಊ.ಕ) ಇದು ಹೆಚ್ಚಾಗಿ ಕಂಡು ಬರುವುದು ಕನ್ನಡನಾಡಿನ ಮಲೆನಾಡು ಭಾಗಗಳಲ್ಲಿ. ಈ ಭಾಗಗಳಲ್ಲಿ ವರ್ಷಕ್ಕೆ ಆರುತಿಂಗಳು ಭಾರಿ ಮಳೆ ಸುರಿಯುವದರಿಂದ ಬಯಲಾಟ ಪ್ರದರ್ಶನ ನೀಡಲು ಸಾಧ್ಯವಿಲ್ಲ. ಹೀಗಾಗಿ ಮಳೆಗಾಲದಲ್ಲಿ ದೇವಸ್ಥಾನ, ಅಂಗಳ,ಚಾವಡಿಗಳಲ್ಲಿಯೇ ತಾಳಮದ್ದಳೆಯ ಕೂಟಗಳು ನಡೆಯುತ್ತವೆ. ಭಾಗವಂತ ಹಿಮ್ಮೇಳದೊಡನೆ ಒಂದು ಕಡೆ ಕುಳಿತರೆ, ಅವನ ಎದುರಿಗೆ ಪಾತ್ರಧಾರಿಗಳು ಕುಳಿತಿರುತ್ತಾರೆ. ಭಾಗವಂತನ ಪದದ ಅರ್ಥಕ್ಕೆ ಅನುಗುಣವಾಗಿ ಪಾತ್ರಧಾರಿಗಳು ಕುಳಿತುಕೊಂಡೇ ಸಂಭಾಷಣೆ ನಡೆಸುತ್ತಾರೆ. ಅಂದರೆ ಹಾಡಿನ ಅರ್ಥ ಹೇಳುತ್ತಾರೆ. ಜನರು ನೂರಾರು ಸಂಖ್ಯೆಯಲ್ಲಿ ಬಂದುಕುಳಿತಿದ್ದು ಈ ಸಂವಾದವನ್ನು ಸಂತೋಷವನ್ನು ಅನುಭವಿಸುತ್ತಾರೆ. ನಾಲ್ಕಾರು ಜನ ಒಂದೆಡೆ ಕುಳಿತು ಒಂದು ಕಥೆಯಲ್ಲಿನ ಬೇರೆ ಬೇರೆ ಪಾತ್ರಗಳ ಚಿತ್ರಣವನ್ನು ಪದ್ಯಗಳ ಆಧಾರದ ಮೇಲೇ ತಮ್ಮ ಅರ್ಥವನ್ನು ಹೇಳುತ್ತಾರೆ.

**ಸೂತ್ರದಗೊಂಬೆಯಾಟ**

ಈ ಹಿಂದೆ ಗೋಕರ್ಣ ಜಾತ್ರೆ, ಮುರೇಡೆಶ್ವರ ಜಾತ್ರೆಗಳಲ್ಲಿ ಕಂಡು ಬರುವ ಈ ಸೂತ್ರದ ಗೊಂಬೆಯಾಟ ಕಲೆ ಈಗ ನಶೀಶುತ್ತಿದೆ. ಇದು ಬಯಲಿನಲ್ಲಿ ಪ್ರದರ್ಶನವಾಗುವ ಒಂದು ಕಲೆ. ನಟರಿಗೆ ಬದಲಾಗಿ ಮರದ ಗೊಂಬೆಗಳನ್ನು ಸೂತ್ರ ಕ್ಕೆ ಕಟ್ಟಿ ಆಟವಾಡಿಸುವ ದೃಷ್ಟಿಯಿಂದ ಸೂತ್ರ ದ ಗೊಂಬೆಯಾಟ ಎಂದು ಕರೆಯಲಾಗಿದೆ. ''ಈ ಗೊಂಬೆಗಳು ಎರಡರಿಂದ ಎರಡೂವರೆ ಅಡಿ ಎತ್ತರವಿದ್ದು ಹಗುರವದ ಮರಗಳಿಂದ ಮಾಡಿದ ಮಾನವ ದೇಹದ ಬೇರೆ ಬೇರೆ ಅವಯವಗಳಾಗಿರುತ್ತವೆ. ಇವಗಳು ಶರೀರದ ಜೋಡಣೆಗನುಗುಣವಾಗಿ ನಿಂತು ಸುಲಭವಾಗಿ ಚಲಿಸುವಂತೆ ಕಪ್ಪು ಬಣ್ಣದ ದಾರವನ್ನು ತಲೆ. ಹಸ್ತ ಮಂಡಿಗಳ ಭಾಗಗಳಿಗೆ ಕಟ್ಟಿರುತ್ತಾರೆ. ಪಾತ್ರಕ್ಕೆ ತಕ್ಕಂತೆ ಬಣ್ಣ ಬಳಿದು ಉಡುಪು ತೊಡಿಸುವದರ ಜೊತೆಗೆ ಅದರ ಮೇಲೆ ಕಿರೀಟ, ಭುಜಕೀರ್ತಿ,ಎದೆಹಾರ,ವೀರಗಾಸೆ ಮುಂತಾದವನ್ನು ಕಟ್ಟುತ್ತಾರೆ, ಮನುಷ್ಯರಿಗೆ ಬದಲಗಿ ಈ ಗೊಂಬೆಗಳು ಪಾತ್ರವಹಿಸುತ್ತವೆ. ಈ ಗೊಂಬೆಗಳಿಗೆ ಕಟ್ಟಿದ ಸೂತ್ರವನ್ನು ಹಿಡಿದು ಅವುಗಳನ್ನು ಆಡಿಸುವವನೇ ಸೂತ್ರಧಾರ. ಕಥೆಯ ಅನುಗುಣವಾಗಿ ಮನುಷ್ಯ ಬದುಕಿನ ನಡವಳಿಕೆಗಳನ್ನು ಗೊಂಬೆಗಳು ಅಭಿನಯಿಸಿ ತೋರುವಂತೆ ಪರದೆಯ ಹಿಂದೆ ಇರುವ ಸೂತ್ರಧಾರ ತನ್ನ ಬುದ್ಧಿ ಕುಶಲತೆಯಿಂದ ಕಾರ್ಯನಿರ್ವಹಿಸುತ್ತಾನೆ. ಎಲ್ಲಾ ಪಾತ್ರಗಳ ಮಾತುಗಳನ್ನು ಆತನೆ ಆಡುತ್ತಾನೆ. ಸ್ವಲ್ಪ ಎತ್ತರವಾದ ಅಟ್ಟದ ಮೇಲಿರುವ ಗೊಂಬೆಗಳು ಪರದೆಯ ಮುಂದೆ ಅಭಿನಯಿಸುತ್ತಿರಲು ಅದಕ್ಕನುಗುಣವಗಿ ಹಿಮ್ಮೇಳವು ಪರದೆಯ ಹಿಂದೆ ನಿಂತು ಮಾತು.ಹಾಡು. ಶಬ್ದಗಳನ್ನು ಸಂಯೋಜಿಸಿ ಸಹಕರಿಸುತ್ತದೆ.ಹೀಗಾಗಿ ನೋಡುವ ಪ್ರೇಕ್ಷಕರಿಗೆ ಅತೀವ ಆನಂದವನ್ನು ನೀಡುವ ಕಲೆಯಾಗಿ ಕಂಡು ಬರುತ್ತದೆ.'' [೨೨] ಬಯಲು ರಂಗಮಂದಿರವೇ ಗೊಂಬೆಯಾಟಕ್ಕೆ ಸೂಕ್ತ ವೇದಿಕೆ. ಸಾಮಾನ್ಯವಾಗಿ ಹತ್ತು ಅಡಿ ಉದ್ದ, ಐದು ಅಡಿ ಎತ್ತರ, ನಾಲ್ಕೈದು ಅಡಿ ಅಗದಷ್ಟಿರುವ ಒಂದು ಚೌಕಟ್ಟಿನ ಅಟ್ಟದಲ್ಲಿ ಸೂತ್ರದ ಗೊಂಬೆಯಾಟವನ್ನು ತೋರಿಸುತ್ತಾರೆ. ಮೃದಂಗ,ತಾಳ, ಮುಖವೀಣೆ, ಗೆಜ್ಜೆ ಮುಂತಾದ ಪಕ್ಕ ವಾದ್ಯಗಳೊಡನೆ ಭಾಗವತರು ಅಟ್ಟದ ಒಳಗೆ ಬಲಭಾಗದಲ್ಲಿ ನಿಂತು ಹಾಡಿದರೆ. ಸೂತ್ರಧಾರರು ಹಿಮ್ಮೇಳದೊಂದಿಗೆ ಸಂಭಾಷಣೆ ಮಾಡುತ್ತಾರೆ. ರಾಮಾಯಣ, ಮಹಾಭಾರತ, ಪುರಾಣದ ಪ್ರಸಂಗಗಳೇ ಕಥಾವಸ್ತುವಾಗಿ ಕಂಡುಬರುತ್ತವೆ. ಈ ಕಲೆ ಕ್ರಮೇಣ ನಶಿಸುತ್ತಿರುವುದು ಕಂಡು ಬರುತ್ತದೆ.

**ತೊಗಲು ಗೊಂಬೆಯಾಟ**

ಕಥಾವಸ್ತುಗಳಲ್ಲಿ ಯಕ್ಷಗಾನ, ಸೂತ್ರದಗೊಂಬೆಯಾಟ ರಾಮಾಯಣ, ಮಹಾಭಾರತ, ಪುರಾಣದ ಪ್ರಸಂಗಗಳೇ ಕಂಡುಬಂದರೂ ಯಕ್ಷಗಾನ ಜೀವಂತವ್ಯಕ್ತಿ ಪಾತ್ರಧಾರಿಯಾಗಿದ್ದರೆ.ಇಲ್ಲಿ ನಿರ್ಜೀವ ಗೊಂಬೆಗಳಿಗೆ ಕುಣಿಸಿಅರ್ಥವನ್ನು ಮನುಷ್ಯನೇ ಹೇಳುತ್ತಾನೆ. ''ತೊಗಲಿನಿಂದ ತಯಾರಿಸಿದ ಗೊಂಗೆಗಳ ಮೂಲಕ ಆಡಿಸುವ ಆಟವೇ ತೊಗಲುಗೊಂಬೆಯಾಟ. ಜಿಂಕೆ ಅಥವಾ ಮೇಕೆಯ ಚರ್ಮವನ್ನು ಹದಗೊಳಿಸಿ ತಮಗೆ ಬೇಕಾದ ಆಕಾರಕ್ಕೆ ಕತ್ತರಿಸಿ ಬಣ್ಣ ಹಾಕಿ ಗೊಂಬೆಗಳನ್ನು ತಯಾರಿಸುತ್ತಾರೆ. ಗೊಂಬೆಗಳನ್ನು ಆಡಿಸಿದಾಗ ಅತ್ತಿಂದತ್ತ, ಇತ್ತಂದತ್ತ ಚಲಿಸಲು ಅನುಕೂಲವಾಗುವಂತೆ ಕೈ ಕಾಲುಗಳಿಗೆ ಕೀಲುಗಳನ್ನು ಜೋಡಿಸುತ್ತಾರೆ. ಕೈಚಳಕದಿಂದ ಕುಣಿಸಲು ಅನೂಕೂಲವಾಗುವಂತೆ ಅವುಗಳ ಹಿಂದಕ್ಕೆ ಬಿದರಿನ ಕಡ್ಡಿ ಕಟ್ಟಿರುತ್ತಾರೆ. ಗೊಂಬೆಯಾಟದ ಯಶಸ್ಸಿರುವುದು ಆಡಿಸುವ ಕಲಾವಿದನ ಕೈಚಳಕದ ಮೇಲೆ. ಗೊಂಬೆಯಾಟಕ್ಕೆ ಆದರದೇ ಆದ ಒಂದು ರಂಗಸಜ್ಜಿಕೆ ಇರುತ್ತದೆ. ಇದನ್ನು ಅಟ್ಟ ಎಂದು ಕರೆಯುತ್ತಾರೆ. ಅದರ ಅಗಲ, ಉದ್ದ ಎಂಟು ಅಡಿ, ಎತ್ತರ ಆರು ಅಡಿ. ರಂಗಮಂಚದ ಮುಂಭಾಗದಲ್ಲಿ ಮಾತ್ರ ಪರದೆಯಂತೆ ಕೆಳಭಾಗಕ್ಕೆ ಎರಡೂವರೆ ಅಡಿಯಷ್ಟು ಎತ್ತರ ಕರಿಕಂಬಳಿಯನ್ನು ಮೇಲುಭಾಗಕ್ಕೆ ತೆಳುವಾದ ಬಿಳಿಪಂಚೆಯನ್ನೂ ಕಟ್ಟುತ್ತಾರೆ.ಇದರಿಂದಾಗಿ ಕಂಬಳಿ ಹಿಂಭಾಗದಲ್ಲಿರುವ ಗೊಂಬೆಗಳನ್ನು ಕುಣಿಸುವಾತ ಪ್ರೇಕ್ಷಕರಿಗೆ ಅಕರ್ಷಕವಾಗಿ ಕಾಣುತ್ತವೆ.''[೩] ಒಟ್ಟಾರೆ ಈ ತೊಗಲು ಗೊಂಬೆಯಾಟವು. ತೆರೆಯ ಮರೆಯಲ್ಲಿ ನಡೆಯುವ ಆಟವಾಗಿದೆ. ಏಕೆಂದರೆ ತೊಗಲು ಗೊಂಬೆಗಳು ತೆರೆಯ ಹಿಂದೆ ಪ್ರದರ್ಶನಗೊಳ್ಳುತ್ತವೆ. ಅಟ್ಟದಲ್ಲಿ ತಮಟೆ ಬಡಿಯುವವನು ಒಂದು ಬದಿಯಲ್ಲಿದ್ದರೆ, ಸೂತ್ರಧಾರ ಮತ್ತೊಂದು ಭಾಗದಲ್ಲಿರುತ್ತಾನೆ. ಹಾರ್ಮೋನಿಯಂ, ತಬಲ, ಮೃದಂಗ, ತಾಳಗಳೆಲ್ಲವು ಆಟದಲ್ಲಿ ಸಂಯೋಜನೆಗೊಂಡು ಕುಟುಂಬದವರೆಲ್ಲರೂ ಸಕ್ರೀಯವಾಗಿ ಪಾಲ್ಗೊಳ್ಳುತ್ತಾರೆ. ಇಲ್ಲಿಯ ದೃಶ್ಯ, ಸಂಗೀತಗಳೆರಡೂ ಮೇಳೈಸಿ ಪ್ರೇಕ್ಷಕರ ಮನರಂಜಿಸುತ್ತವೆ. ರಾಮಾಯಣ, ಮಹಾಭಾರತ, ಭಾಗವತದಂಥ ಪೌರಾಣಿಕವಸ್ತುಗಳೇ ಈ ಆಟದ ಕಥಾ ಪ್ರಸಂಗಗಳಾಗಿರುತ್ತವೆ. ಈ ಕಲೆಯು ಕರ್ನಾಟಕ, ಆಂಧ್ರ, ಮಹಾರಾಷ್ಟ್ರ, ಕೇರಳ ರಾಜ್ಯಗಳಲ್ಲಿ ವಿಶೇಷವಾಗಿ ರೂಢಿಯಲ್ಲಿವೆ. ಕರ್ನಾಟಕದಲ್ಲಿ ಮಂಡ್ಯ, ಮೈಸೂರು, ಬೆಂಗಳೂರು, ಕೋಲಾರಗಳಲ್ಲಿ ಈಕಲೆ ನೆಲೆಯನ್ನು ಕಾಣಬಹುದು ಆದರೆ. – ಈ ಜಿಲ್ಲೆಯ ಪ್ರಸಿದ್ಧ ಜಾತ್ರೆಗಳಾದ ಮಾರಿಕಾಂಬೆ, ಗೋಕರ್ಣ ಜಾತ್ರೆಗಳಲ್ಲಿ ಈ ತೊಗಲು ಗೊಂಬೆಯಾಟವು ಕಂಡುಬರುತ್ತದೆ.

**ದೊಡ್ಡಾಟ**

ಕರವಾಳಿ ಜಿಲ್ಲೆಯಲ್ಲಿ ಯಕ್ಷಗಾನವನ್ನು ಹೊಲುವ ದೊಡ್ಡಾಟವನ್ನು ಇಡೀ ರಾತ್ರಿಯೆಲ್ಲಾ ಅಭಿನಯಕ್ಕೆ ಒಳಪಡುವ ದೃಷ್ಟಿಯಿಂದ ಇದನ್ನು ದೊಡ್ಡಾಟ ಎಂದು ಕರೆಯಲಾಗಿದೆ. ಇದೂ ಕೂಡ ಬಯಲಿನಲ್ಲಿ ಆಡುವ ಆಟ. ಇದು ಉತ್ತರ ಕರ್ನಾಟಕ ಜಿಲ್ಲೆಯಲ್ಲಿ ಪ್ರಭಾವದಿಂದ ಈ ಜಿಲ್ಲೆಯ ಹಳ್ಳಿಯಾಳ ಮುಂಡಗೋಡ ಜಾತ್ರೆಯಗಳಲ್ಲಿ ಕಂಡು ಬರುತ್ತದೆ. ಮನರಂಜನೆಯ ದೃಷ್ಟಿಯಿಂದ ಜನರೇ ವೇದಿಕೆಯನ್ನು ನಿರ್ಮಿಸಿಕೊಂಡು ದೊಡ್ಡಾಟವನ್ನು ಆಡುತ್ತಾರೆ. ರಾಮಾಯಣ ಮತ್ತು ಮಹಾಭಾರತದಂತಹ ಪುರಾಣ ವಸ್ತುಗಳೇ ಈ ಆಟದಲ್ಲಿ ಬಳಕೆಗೊಂಡು ಇಲ್ಲಿ ಅದ್ಭೂತ ವೇಷಭೂಷಣ, ಹಾಡು, ಕುಣಿತಗಳೆಲ್ಲವೂ ಇರುತ್ತವೆ ''ದಾನವ ಮುಂತಾದ ಅಮಾನುಷ ಮತ್ತು ಅತೀ ಮಾನುಷ ಅದ್ಭೂತ ಪಾತ್ರಗಳ ಸೃಷ್ಠಿಯಿಂದಲೇ ಈ ಕಲೆ ಜನಪ್ರಿಯತೆ ಗಳಿಸಿದೆ''[೨೪] ದೊಡ್ಡಾಟದ ರಂಗಸ್ಥಳ ಹೆಚ್ಚು ವಿಸ್ತಾರವಾಗಿರುತ್ತದೆ. ಎಲ್ಲಾ ಬದಿಯಲ್ಲೂ ಪ್ರೇಕ್ಷಕರು ಕುಳಿತು ಆಟವನ್ನು ವೀಕ್ಷಿಸುತ್ತಾರೆ. ದೊಡ್ಡಾಟದಲ್ಲಿ ಮುಮ್ಮೇಳ, ಹಿಮ್ಮೇಳ ಎರಡು ಇರುತ್ತದೆ. ಪಾತ್ರಧಾರಿ ಮುಮ್ಮೇಳದೊಂದಿಗೆ ತಾನೂ ಹಾಡುತ್ತಾನೆ. ಹಿಮ್ಮೇಳದವರು ಹಾಡುವಾಗ ನರ್ತಿಸುತ್ತಾನೆ. ಪಾತ್ರಧಾರಿಗಳು ಪದ್ಯವನ್ನು

ಅರ್ಥೈಸುತ್ತಾ ಪ್ರಾಸಬದ್ದವಾಗಿ ಉದ್ದುದ್ದ ಮಾತಾಡುತ್ತಾರೆ. ರಂಗಸ್ಥಳದ ಒಂದು ಪಕ್ಕದಲ್ಲಿ ವಾದ್ಯಗಾರರು, ಮುಮ್ಮೇಳದವರಿದ್ದು ಮೇಳದಲ್ಲಿ ಒಬ್ಬ ಕಥೆಗಾರನಿರುತ್ತಾನೆ. ದೊಡ್ಡಾಟಕ್ಕೆ ಉಪಯೋಗಿಸುವ ವಾದ್ಯಗಳೆಂದರೆ ಪುಂಗಿ, ಬಟ್ಟಲತಾಳ, ಪಿಟೀಲು, ಮದ್ದಳೆ ಈ ಆಟದಲ್ಲಿ ಪರದೆಗಳ ಉಪಯೋಗವಿಲ್ಲ. ಪಾತ್ರಗಳು ಯಾವ ಕಡೆಯಿಂದ ಬೇಕಾದರೂ ಪ್ರವೇಶಿಸಿ ನಿರ್ಗಮಿಸಬಹುದು.

**ಸಣ್ಣಾಟ**

ಬಯಲಾಟದ ಒಂದು ಪ್ರಭೇದವಾದ ಸಣ್ಣಾಟವನ್ನು ಉತ್ತರ ಕನ್ನಡ ಜಿಲ್ಲೆಯಲ್ಲಿ ಆಡುವುದು ಕಡಿಮೆ. ಹಾಲಕ್ಕಿಗಳು, ಹರಕಂತರು, ಹಳ್ಳೇರು ಮುಂತಾದರಲ್ಲಿ ಪ್ರಚಲಿತವಿದೆಯಾದರೂ, ಇದು ಬಯಲು ಸೀಮೆಯಿಂದ ಇಲ್ಲಿಗೆ ವಲಸೆ ಬಂದ ಕಲೆ. ಸಂಗ್ಯಾ ಬಾಳ್ಯಾ, ಗುಂಡು ಬರಮ, ಟಂಪಲ ರಾಜ ಮುಂತಾದ ಎರಡು ಮೂರು ಸಣ್ಣಾಟಗಳು ಮಾತ್ರ ಹಾಲಕ್ಕಿಗಳಲ್ಲಿವೆ. ಸಂಗ್ಯಾಬಾಳ್ಯಾ ಆಟವನ್ನು ಹಾಲಕ್ಕಿಗಳು ಬಲ್ಲವರಿಂದ ಕಲಿತು ಪರಿಣಿತಿ ಪಡೆದು ಆಡುತ್ತಾರೆ. ಈ ಆಟವನ್ನು ಬಯಲು ಸೀಮೆಯ ವ್ಯಾಪಾರಿಗಳಿಂದ ಮುಕ್ರಿಗಳು ತಾವು ಕಲಿತಿರುವದ್ದಾಗಿ ಹೇಳುತ್ತಾರೆ.ಅವರಿಂದ ಹಾಲಕ್ಕಿಗಳು ಕಲಿತರೆಂದು ಅಂಕೋಲಾ ಸೀಮೆಯ ಹಾಲಕ್ಕಿಗಳು ಈ ಆಟವನ್ನು ಗಟ್ಟದ ಮೇಲಿನವರಿಂದ ಕಲಿತುದಾಗಿ ಹೇಳುತ್ತಾರೆ. ಈ ಆಟವನ್ನು ಕಲಿತ ಹರಕಂತ ಹಾಗೂ ಹಳ್ಳೇರ ಭಾಗವತರೂ ಇದ್ದಾರೆ. ಆಟವನ್ನಾಡುವಾಗ ಹಾಲಕ್ಕಿ ಒಕ್ಕಲು ಆಟದಲ್ಲಿ ತಮ್ಮ ಸಾಮಾಜಿಕ ಉಪಭಾಷೆಯನ್ನೇ ಬಳಸಿ ಆಟವಾಡುತ್ತಾರೆ. ಆದರೆ ಕಥೆಯ ಮೂಲದಲ್ಲಿ ವಿಶೇಷ ಬದಲಾವಣೆಯಿಲ್ಲ. "ಅಲ್ಪ ವೇಳೆಯಲ್ಲಿ ಮುಗಿಯದ ದೊಡ್ಡಾಟದಲಾಗುವ ಕಾಲಹರಣವನ್ನು ಕಡಿಮೆಗೋಳಿಸುಲೋಸ ಗುವೇ ಈ ಸಣ್ಣಾಟ ಬಂದಿದೆ" [೫] ಈ ಕಲೆಯ ಶೈವ ಮತ್ತು ವೈಷ್ಣವರ ಮತ ಪ್ರಚಾರದ ಉದ್ದೇಶದಿಂದ ಹುಟ್ಟಿಕೊಂಡಂತೆ ಕಂಡು ಬುತ್ತದೆ. ಇದರಲ್ಲಿ ಶರಣರಾಟ, ರಾಜನಾಟ, ದಾಸರಾಟ, ಸಾಮಾಜಿಕಾಟ ಎಂಬ ನಾಲ್ಕು ಪ್ರಕಾರಗಳು ಕಂಡುಬರುತ್ತವೆ. ನಮ್ಮಂತೆಯೇ ಬೆಳೆದು ಈ ಸಮಾಜ ಸುಧಾರಣೆಗೆ ಶ್ರಮಿಸುತ್ತ ತಮ್ಮದೆಯಾದ ತತ್ವೋಪದೇಶವನ್ನು ನೀಡಿ ಅತಿಮಾನುಷರಾದ ಶರಣರ, ದಾಸರ, ಸಾಧುಸಂತರ, ಸಮಾಜ ಬಂಧುಗಳ ಜೀವನವೇ ಸಣ್ಣಾಟಕ್ಕೆ ಕಥಾವಸ್ತು. ಸಣ್ಣಾಟದ ವೈಶಿಷ್ಟ್ಯ ಹಾಡು ಮತ್ತು ಕುಣಿತ. ಇಲ್ಲಿ ಸಂಭಾಷಣೆ ಒಂದು ಪಾಲಾದರೆ ಹಾಡು ಕುಣಿತ ಮುಕ್ಕಾಲು ಪಾಲು. ಸಣ್ಣಾಟವು ಪಂದ್ಯದ ಅರ್ಥವನ್ನು ಒಡೆದು ಹೇಳುವ ಪಾತ್ರಧಾರಿಯ ಸಾಮರ್ಥವನ್ನು ಅವಲಂಬಿಸಿರುತ್ತದೆ. ಸಣ್ಣಾಟದ ವೇಷಭೂಷಣ ಅತ್ಯಂತ ಸರಳ. ಬೆನ್ನ ಹಿಂದಕ್ಕೆ ಉದ್ದವಾದ ಬಣ್ಣದ ಬಟ್ಟೆಯೊಂದನ್ನು ಕಟ್ಟಿಸಿಕೊಳ್ಳುತ್ತಾರೆ. ಇದರಲ್ಲಿ ಹಾರ್ಮೋನಿಯಂ, ತಬಲವಲ್ಲದೆ ಚರ್ಮವಾದ್ಯವನ್ನು ಬಳಸುತ್ತಾರೆ.

**ಸಂಕೀರ್ಣ ಕಲೆಗಳು**

**ಸಂಕೀರ್ಣಕಲೆಗಳು ಆರಾಧನೆ ಮತ್ತು ಪ್ರದರ್ಶನ ಎರಡನ್ನೂ ಒಳಗೊಂಡಿರುವದರಿಂದ ಸಂಕೀರ್ಣ ಕಲೆಗಳು ಎಂದು ಕರೆದಿದ್ದೇನೆ.**

**೧. ಸಿಂಹ ನೃತ್ಯ**

ಸಿಂಹ ನೃತ್ಯದ ಮೂಲ ಉದ್ದೇಶ ಮನರಂಜನೆ. ಸಿಂಹ ವೇಷದ ಪ್ರದರ್ಶನ ಯಕ್ಷಗಾನದಲ್ಲಿ ಹಾಗೂ ಜಾತ್ರೆ ಉತ್ಸವಗಳಲ್ಲಿ ಕಂಡುಬರುತ್ತದೆ. ಬಣ್ಣದಿಂದ ಇಲ್ಲವೇ ಮುಖವಾಡದಿಂದ ಸಿಂಹವೇಷವನ್ನು ನಿರ್ಮಿಸಿಕೊಂಡು ಮನುಷ್ಯರೇ ಮೈ ತುಂಬಾ ಬಣ್ಣ ಹಾಕಿಕೊಂಡು ನೃತ್ಯ ಮಾಡುತ್ತಾರೆ. ವಾದ್ಯದ ಗತ್ತಿಗನುಗುಣವಾಗಿ ಸಿಂಹ ನೃತ್ಯವನ್ನು ಮಾಡಿ ಅದು ಬೇಟೆಯಾಡುವ ಅನುಕರಣೆಯನ್ನು ಮಾಡುವ ಸಂಪ್ರದಾಯ ಕರಾವಳಿ ಜಾತ್ರೆಯಲ್ಲಿದೆ. ಸಿಂಹವೇಷಕ್ಕೆ ಸುಂದರ ರೂಪ ಕೊಟ್ಟ ಪ್ರಥಮ ಕಲಾವಿದ 'ಧಾರೇಶ್ವರ ಸುಬು'. ಅನಂತರ ಸಿಂಹವೇಷವನ್ನು ಕರ್ಕಿಯ 'ಕೃಷ್ಣ ಹಾಸ್ಯಗಾರ'ರಿಗೆ ಸಲ್ಲುತ್ತದೆ. ಇವರಿಬ್ಬರಿಂದ ಪ್ರಭಾವಿತರಾದ ಅನೇಕ ಸಿಂಹ ವೇಷ ಕಲಾವಿದರು ಕರಾವಳಿಯಲ್ಲಿದ್ದಾರೆ.ಕುಣಿತಕ್ಕೆ ಹಿನ್ನಲೆಯಾಗಿ ಡೋಲು.ನಗಾರಿ, ಮೃದಂಗ, ಚಂಡೆ, ತಾಳ, ಶೃತಿ ವಾದ್ಯಗಳನ್ನು ಬಳಸುತ್ತಾರೆ.

**೨. ಕರಡಿ ಮಜಲು**

ಉತ್ತರ ಕನ್ನಡದಲ್ಲಿ ಈ ಕಲೆಯ ಉತ್ತರ ಕರ್ನಾಟಕದಲ್ಲಿ ಪ್ರಭಾವದಿಂದ ಬಂದಿದೆ. ಕರಡಿ ಮಜಲುನಲ್ಲಿ ಆರು ಜನ ಹಿಮ್ಮೇಳ ವಾದ್ಯ,ಒಬ್ಬ ಹಾಡುಗಾರರು 'ಇರುತ್ತಾರೆ. ಇಬ್ಬರು ಶಹನಾಯಿ ಒಟ್ಟು ಒಂಭತ್ತು ಜನರಿದ್ದು ಸಾಮನ್ಯ ಉಡುಪಿನಲ್ಲಿ ಇರುತ್ತಾರೆ. ಚರ್ಮದಿಂದ ಮಾಡಿದ ವಾದ್ಯದ ಜೊತೆಗೆ ಬೇರೆ ವಾದ್ಯಗಳು ಕಂಡುಬರುತ್ತದೆ,ಒಬ್ಬ ಹಾಡುಗಾರ ಇರುತ್ತಾನೆ.ಹಿಂದೆ ಮುಂದೆ ವಿರುದ್ದವಾಗಿ 'ನಿಂತು ವಾದನ ಮಾಡುತ್ತಾರೆ. ನಮ್ಮ ಜಿಲ್ಲೆಯ ಬಯಲು ಸೀಮೆಯ ಜಾತ್ರೆಗಳಲ್ಲಿ ಜಾತ್ರೆ- ಉತ್ಸವಗಳಲ್ಲಿ ಪಲ್ಲಕ್ಕಿ, ಮೆರವಣಿಗೆ ಸಂದರ್ಭದಲಿ ಈ'ಕಲೆ ಕಂಡು ಬರುತ್ತದೆ.

**೩. ಕೊಂಡಮಾಮ**

ಜಾತ್ರೆಗಳಲ್ಲಿ ವಾರಗಟ್ಟಲೇ ಉಳಿದು, ಜಾತ್ರೆಯಲ್ಲಿ ನೆರೆದ ಜನರಿಗೆ ಭವಿಷ್ಯ ಹೇಳಿ, ತಮ್ಮ ಹೊಟ್ಟೆಯ ಪಾಲನೆ ಮಾಡಿಕೊಳ್ಳುವ, ಈ ಜನರು ಇಂತಹ ವಿಶೇಷ ಸಂದರ್ಭಗಳಲ್ಲಿ ಕಾಣಿಸಿಕೊಳ್ಳುವದು ಸಹಜ. ಭವಿಷ್ಯ ಹೇಳುವದೇ ಕಸುಬುಗಳಾಗಿ ಮಾಡಿಕೊಂಡ ಇವರು ನಂಬಿಕೆ ಬರುವಂತೆ ಶಾಸ್ತ್ರ ಹೇಳುತ್ತಾರೆ. "ಶಾಸ್ತ್ರ ಹೇಳಿ ಜೀವನ ನಡೆಸುವ ಒಂದು ಅಲೇಮಾರಿ ಜನಾಂಗವೇ ಕೊಂಡಮಾಮರು. ಶಾಸ್ತ್ರ ಹೇಳುವಾಗ ಪ್ರತಿಯೊಂದು ಸಾಲಿನ ಕೊನೆಯಲ್ಲೋ 'ಕುರ್ರಮಾಮಾ' ಎಂದು ಹೇಳುವುದರಿಂದ 'ಕುರ್ರಮಾಮಾ', 'ಕುರುಮಾಮ', 'ಕುರುಕುರುಮಾಮ' ಎಂದು ಕರೆಯುವ ವಾಡಿಕೆ. ಆಂಧ್ರದ ಮೂಲದವರಾದ ಇವರು ಕರ್ನಾಟಕದಾದ್ಯಂತ ಕಂಡು ಬರುತ್ತಾರೆ. ಈ ಕಲಾವಿದರೂ ವೀರಗಚ್ಚೆ, ಎದೆಗೆ ಕಾವಿ ಬಟ್ಟೆ ಇಲ್ಲವೇ ಅರೆದೋಳಿನ ಕರಿಯ ಕುಪ್ಪಸ ತೊಡುತ್ತಾರೆ. ಕೈಕಾಲುಗಳಿಗೂ ಬಿಳಿ ಎಕ್ಕದ ಬೇರಿನ ಬಳೆಗಳಿರುತ್ತವೆ. ಇದರೊಂದಿಗೆ ಬಿಗಿದ ಕಟ್ಟಿದ ಮುಡಿ, ಕೈ ಏಕನಾದಕ್ಕೆ ಸಿಕ್ಕಿಸಿದ ನವಿಲುಗರಿ, ಕವಡೆಯ ನಡುಪಟ್ಟಿ, ಕೆಂಪು ಮತ್ತು ಬಿಳಿಯ ನಾಮ, ನೇತು ಹಾಕಿದ ಚೀಲ, ಕಿವಿಗೆ ಚಂದ್ರಮುಖಿ, ಬೆನ್ನಿಗೆ ಬತ್ತಳಿಕೆ, ಉದ್ದವಾದ ಗಡ್ಡ ಮೀಸೆ, ಕೆಂಪುದಾರದಲ್ಲಿ ಪೋಣಿಸಿದ ಹಂದಿ ಹಲ್ಲು, ಮೊದಲಾದ ಉಡುಗೆ ತೊಡುಗೆಗಳಿರುತ್ತವೆ. ಕೊಂಡಮಾಮನ ಕೈಯಲ್ಲಿ ಚಿಟಿಗೆ ಹಾಗೂ ಮತ್ತೊಂದು ಕೈಯಲ್ಲಿ ಪುಟ್ಟ ತಂಬೂರಿ ಇರುತ್ತದೆ". [೬] ಮಾರಿಯಮ್ಮನ ಜಾತ್ರೆಗಳಲ್ಲಿ ಹೆಚ್ಚು ಹೆಚ್ಚು ಕಂಡು ಬರುತ್ತಾರೆ. ಜಾತ್ರೆಯಲ್ಲಿ ನೆರೆದ ಜನರಿಗೆ ಮುಖ, ಕೈ, ನೋಡಿ ಮುಗ್ದ ಜನರಿಗೆ ಸಂತೋಷವಗುವಂತೆ ಇವರು ಬಯಸಿದ್ದೆಲ ಆಗಬಹುದೆಂದು ನಂಬಿಸಿ ಹಣ ಪಡೆಯುತ್ತಾರೆ.

**೪. ಕೀಲು ಕುದರೆ ಕುಣಿತ**

ಉತ್ತರ ಕನ್ನಡ ಜಿಲ್ಲೆಯ ಬಹುತೇಕ ರಥೋತ್ಸವಗಳ ಮೆರೆವಣಿಗೆಯ ಸಂದರ್ಭದಲ್ಲಿ ಕೀಲು ಕುದರೆ ಕುಣಿತವಿರುತ್ತದೆ. ಅಂಕೋಲಾ ತಾಲೂಕಿನ ಸುರೇಶ ವರ್ಣೇಕರ ಕೀಲು ಕುದರೆಯ ಕುಣಿತದ್ದಲ್ಲಿ ಸಿದ್ಧ ಹಸ್ತರು. ಇವರು ಅಂಕೋಲಾ ದಹಿಂಕಾಲ ಉತ್ಸವ ರಥೋತ್ಸವ ಸಂದರ್ಭದಲ್ಲಿ ಕೀಲು ಕುದರೆ ಕುಣಿತ ಪ್ರದರ್ಶನ ಮಾಡುವರು. "ಸಾಮಾನ್ಯವಾಗಿ ಕೀಲು ಕುದುರೆ ಕಲಾವಿದನು ರಾಜ-ರಾಣಿಯರಂತೆ ವೇಷ-ಭೂಷಣ ಮಾಡಿ, ಮುಖಕ್ಕೆ ಬಣ್ಣ, ಕಾಲಿಗೆ ಗೆಜ್ಜೆ ಕಟ್ಟಿಕೊಂಡು ಕುಣಿಯವರು.ಈ ಕೀಲು ಕುದುರೆಯ ಕುಣಿತದ ದೃಶ್ಯ ಜಾತ್ರೆಗೆ ಬಂದ ಭಕ್ತರಿಗೂ, ಅಲ್ಲಿ ನೆರೆದ ಜನಸಮೂಹಕ್ಕೆ ಮನರಂಜನೆ ನೀಡುತ್ತವೆ. ಕೀಲು ಕುದುರೆಯನ್ನು ಬಿದಿರಿನ ದಬ್ಬೆಗಳಿಂದ ಮಾಡಿ'ಕಾಲುಗಳನ್ನು ಕೆಳಗೆ ಬಿಟ್ಟು ಹೊಟ್ಟೆ, ಎದೆ ಮತ್ತು ಹಿಂಭಾಗವನ್ನು ಕುದುರೆಯ ಆಕಾರದಂತೆ, ಬಿದಿರಿನ ದಬ್ಬೆಗಳಿಂದ ಜೋಡಿಸುತ್ತಾರೆ ಒಳಭಾಗ ಟೊಳ್ಳಾಗಿರುತ್ತದೆ". [೭] ಕೀಲು ಕುದುರೆ ಕುಣಿಯವನ್ನು. ಕುದುರೆ ಆಕಾರದ ಈ ಬಿದಿರಿಗೆ ಅದೇ ಅಳತೆಯ ಬಣ್ಣ ಬಣ್ಣದ ಬಟ್ಟೆ ಹೊದಿಸಿರುತ್ತಾರೆ. ರಾಜ-ರಾಣಿಯರ ವೇಷ-ಭೂಷಣವನ್ನು ಧರಿಸಿದ ಕಲಾವಿದರು, ಈ ಕುದುರೆಯ ಬೆನ್ನಿನಲ್ಲಿ ಸೇರಿ (ಹೊಕ್ಕು) ಹೆಗಲುಗಳಿಗೆ ಕುದುರೆಯ ದಬ್ಬೆಯ ದೇಹವನ್ನು ಹಿಡಿದುಕೊಳ್ಳುವರು. ಕೈಯಲ್ಲಿ ಲಗಾಮು ಹಿಡಿದುಕೊಂಡು ಅದರ ತಲೆ-ಬಾಲಗಳನ್ನು ಆಡಿಸುತ್ತಾ, ಹಿಂದೆ-ಮುಂದೆ ಮಾಡಿ ಕುಣಿದಾಗ ಅದು ಕುದುರೆಯ ಭಂಗಿಯಂತೆ ಕಾಣುತ್ತದೆ.

**೫. ಮರಗಾಲ ಕುಣಿತ**

ಈ ಜಿಲ್ಲೆಯ ಸುಗ್ಗಿ ಜಾತ್ರೆಯಲ್ಲಿ ಕರವಾಳಿ ಜಿಲ್ಲೆಯ ರಥೋತ್ಸವ ಸಂದರ್ಭದಲ್ಲಿ, ಶ್ರೀ ಮಾರಿಕಾಂಬೆ ಜಾತ್ರೆ,, ಗೋಕರ್ಣ ರಥೋತ್ಸವ, ಶಿರಿಶಿ, ಅಂಕೋಲಾ, ಕುಮಾಟದ ವೆಂಕಟ್ರಮಣ ರಥೋತ್ಸವ, ಶ್ರೀ ಮುರಡ್ವೇಸರ ಜಾತ್ರೆ ಭಟ್ಕಳ,

ಹೊನ್ನಾವರ ಅಗ್ರಹಾರ ಜಾತ್ರೆ, ಯಲ್ಲಾಪುರ ಗ್ರಾಮದೇವಿ ಜಾತ್ರೆ ಜಾತ್ರೆಯಲ್ಲಿ ಪ್ರೇಕ್ಷಕರಿಗೆ ಮರಗಾಲು ಕುಣಿತ ಆಕರ್ಷಣೆ ನೀಡುತ್ತದೆ. ಈ ಕುಣಿತ ವಿಶೇಷವಾಗಿ ಹಾಲಕ್ಕಿ ಒಕ್ಕಲಿಗರು ಪ್ರದರ್ಶಿಸುವರು " ಈ ಕುಣಿತದಲ್ಲಿ ಉಪಯೋಗಿಸುವ ಮರಗಾಲುಗಳ ರಚನೆಯ ವಿಶೇಷವಾಗಿದೆ. ಮರಗಾಲಕ್ಕೆ ಉಪಯೋಗಿಸುವ ಕಟ್ಟಿಗೆ ಹಗುರವಾಗಿದ್ದು, ದಪ್ಪವಾಗಿದ್ದು, ಎಶಳಿ ಮರದಿಂದ ಪಡೆಯಲಾಗುತ್ತದೆ. ಮರಗಾಲುಗಳನ್ನು ಸುಮಾರು ಐದರಿಂದ ಆರು ಅಂಗುಲ ಸುತ್ತಳತೆ ಹೊಂದಿದ್ದು ಎರಡು ಅಡಿ ಎತ್ತರವಾಗಿರುತ್ತವೆ. ಮರಗಾಲಿನ ಮೇಲಿನ ಭಾಗ ಅರ್ಧ ಅಡಿಗಿಂತ ಹೆಚ್ಚಾಗಿ ಇಬ್ಭಾಗವಾಗಿ ಕತ್ತರಿಸಿ, ಅರ್ಧಭಾಗ ಹಾಗೆ ಇಟ್ಟು, ಅರ್ಧಭಾಗ ತೆಗೆದು ಹಾಕಿ, ಅದರ ಮೇಲೆ ಪಾದ ಊರುವಂತೆ ಕೆತ್ತನೆ ಮಾಡಿರುತ್ತಾರೆ. ಅದರ ಕೆಳಭಾಗಕ್ಕೆ ಗೆಜ್ಜೆ ಕಟ್ಟಲು ಅನುಕೂಲವಾಗುವಂತೆ ಅರ್ಧ ಅಂಗುಲದಷ್ಟು ನುಣುಪಾಗಿ ತಗ್ಗು ಮಾಡಿರುತ್ತಾರೆ''[೮] ಮರಗಾಲು ಕುಣಿಯವರು ದಪ್ಪವಾದ ಬಟ್ಟೆ ಸುತ್ತಿಕೊಂಡು ಹಿಮ್ಮಡದ ಮೇಲೆ ಭಾರ ಬೀಳುವಂತೆ ರಚನೆ ಮಾಡಿಕುಣಿಯವರು. ಈ ಕುಣಿತಕ್ಕೆ ನಮ್ಮ ಜಿಲ್ಲೆಯ ಮಟ್ಟಿಗೆ ಬೆಳಂಬಾರ,ಬಡಗೇರಿ ಹಾಲಕ್ಕಿ ಒಕ್ಕಲಿಗರು ಪರಿಣಿತರಾಗಿದ್ದು ಯಕ್ಷಗಾನದ ವೇಷ ಭೂಷಣಧರಿಸಿ ಮರಕಾಲು ಕುಣಿತವನ್ನು ಪ್ರದರ್ಶನಮಾಡುತ್ತಾರೆ ಜಾತ್ರೆಯಲ್ಲಿ ಎಲ್ಲವರಿಗಿಂತ ಎತ್ತರದವನಾಗಿ ಮರಕಾಲು ಕುಣಿತ ಮಾಡುವವರು ಕಂಡು ಬರುತ್ತಾರೆ. ಮೆರೆವಣಿಗೆಯಲ್ಲಿ ಇವರು ಮುಂದೆ ಇರುತ್ತಾರೆ.ಕರಾವಳಿ ಜಿಲ್ಲೆಯ ಬಹುತೇಕ ಎಲ್ಲ ಜಾತ್ರೆಗಳಲ್ಲಿ ಕಂಡು ಬರುತ್ತಾರೆ.

**೬. ಹಾವಡಿಗರು**

ಶಿರಿಶಿ ಮಾರಿ ಜಾತ್ರೆಯಲ್ಲಿ ಸಂಧರ್ಭದಲ್ಲಿ ಜನ ಸೇರುವ ಆಯಾಕಟ್ಟಿನ ಜಾಗದಲ್ಲಿ ನಾನು ಹಾವಡಿಗರನ್ನು ಗಮನಿಸಿದ್ದೇನೆ. ಹಾವಾಡಿಗರು ಪುಂಗಿಯನ್ನು ಊದುತ್ತಾ ಹಾವು ಆಡಿಸುವದು, ಹಾವುಗಳಿಂದಲೇ ಹೆಡೆ ಎತ್ತಿ ನೃತ್ಯ ಮಾಡಿಸುವು ನಿಪುಣ ಹಾವಡಿಗರನ್ನು ಜಾತ್ರೆ ಸಂದರ್ಭಗಳಲ್ಲಿ ಕಾಣಬಹುದು. ಹಾವುಗಳನ್ನು ಸಾಕಿ ಪಳಗಿಸಿ ಬುಟ್ಟಯಲ್ಲಿ ಹಾಕಿಕೊಂಡು ಬರುತ್ತಾರೆ, ಆದರೆ ಹಾವಿನ ವಿಷದ ಹಲ್ಲನ್ನು ಕಿತ್ತು ತಂದಿರುತ್ತಾರೆ ಎಂದು ಅವರೇ ಹೇಳುತ್ತಾರೆ. ಅಲೆಮಾರಿ ಜನಾಂಗದವರಾದ ಇವರು ಮೋಡಿ-ಮಾಟ ವಿದ್ಯೆಯಲ್ಲಿ ಪರಿಣಿತರಾಗಿದ್ದರೆ. ಜಾತ್ರೆ ಸಂದರ್ಭದಲ್ಲಿ ಮಾತಿನ ಮೋಡಿಯಿಂದಲೇ ಜನರನ್ನು ತಮ್ಮಡೆಗೆ ಗಮನ ಸೆಳೆಯುವಂತೆ ಮಾಡುತ್ತಾರೆ.

**೭.ವೇಷಗಾರರು**

ಜಾತ್ರೋತ್ಸವಗಳ ಸಂದರ್ಭದಲ್ಲಿ ಈ ವೇಷಗಾರರು ಕಂಡು ಬರುತ್ತಾರೆ ಜಾತ್ರಾ ಮೆರೆವಣಿಗೆಯ ಮುಂದಿನ ಸಾಲಿನಲ್ಲಿ ಇವರು ನಾನ ತರದ ವೇಷಧರಿಸಿ ಕಂಡು ಬರುತ್ತಾರೆ. ಉತ್ತರ ಕನ್ನಡ ಜಿಲ್ಲೆಯ ಹಾಲಕ್ಕಿ ಗೌಡ ಜನಾಂಗದಲ್ಲಿ ಹೆಚ್ಚು ಹೆಚ್ಚು ವೇಷಗಾರರು ಕಂಡು ಬರುತ್ತಾರೆ. ಇವರು ರಾಮಾಯಣ, ಮಹಾಭಾರತದಲ್ಲಿ ಬರುವ ಕೆಲವು ಸನ್ನಿವೇಶ ಆಯ್ದುಕೊಂಡು ಅಂತಹ ವೇಷಗಳನ್ನು ಧರಿಸುವದಲ್ಲದೇ, ಕೆಲವು ಪೌರಾಣಿಕ ವ್ಯಕ್ತಿಗಳ ವೇಷ ಮತ್ತು ಕಲೆ ಕೆಲವೊಂದು ಜಾತ್ರೆಗಳಲ್ಲಿ ಇವರ ಕಲೆ ಜನರನ್ನು ಆಕರ್ಷಿಸುತ್ತದೆ.ಕುಮಾಟದ ಬಳಗಾ ದೇವಿಯ ಜಾತ್ರೆಯ ಸಂದರ್ಭದಲ್ಲಿ ಈ ವೇಷಗಾರರನ್ನು ನಾನು ಗಮನಿಸಿರುತ್ತನೆ. ಈ ಹಿಂದೆ ನೆಡೆದು ಕೊಂಡು ಅಥವಾ ಚಕ್ಕಡಿಗಾಡಿಗಳ ಬರುತ್ತಿದ್ದ ವೇಷ್ಗಾರರು ಇತ್ತಿಚೆಗೆ ಮೋಟಾರವಾಹನದ ಮೇಲೆ ವೇಷಗಾರರು ಬರುತ್ತಾರೆ.

**೮. ಬಸವನಾಡಿಸುವರು**

ಜಾತ್ರೋತ್ಸವಗಳ ಸಂದರ್ಭದಲ್ಲಿ ಜಾತ್ರೆಗಳಿಗೆ ಬರುವ ಇವರು ಪೂರ್ವದಲ್ಲಿ ಸಾಕಿದ ದನಗಳಿಗೆ ಅಲಂಕಾರ ಮಾಡಿ ಮನೆಮನೆಗೆ ಎತ್ತುಳನ್ನು ಅಥವಾ ಆಕಳಗಳನ್ನು ಶೃಂಗರಿಸಿ ಎತ್ತಿನ ಕೊಂಬುಗಳಿಗೆ ಆಲಂಕಾರ-ಮಾಡಿ ಎತ್ತುಗಳಿಗೆ ಬಣ್ಣದ ಬಟ್ಟೆಗಳನ್ನು ತೊಡಿಸುತ್ತಾರೆ ಹಣೆಗೆ ಹಣೆಪಟ್ಟಿ, ಕೊರಳಲ್ಲಿ ಗೆಜ್ಜೆಸರ, ಕಾಲಲ್ಲಿ ಖಡಗ, ಗಗ್ಗರಿ, ಹಾಕುತ್ತಾರೆ,ಮನೆ ಮನೆಗೆ ಈ ಬಸವನ್ನು ಕೆರೆದು ಕೊಂಡು ಹೋಗುತ್ತಾರೆ.ಈ ಮೂಕ ಪ್ರಾಣಿಯಿಂದಲೆ ತಲೆ ಅಲ್ಲಾಡಿಸಿ ಜನರ ಪರವಾಗಿ ಪ್ರಶ್ನೆ ಕೇಳಿ ಮನರಂಜನೆ ಒದಗಿಸುತ್ತಾರೆ.ಉತ್ತರ ಕನ್ನಡ ಜಿಲ್ಲೆಯ ಬಹುತೇಕ ಹಳಿಯಾಳದ ಪೇಟೆ ಬಸವೇಶ್ವರನ ಜಾತ್ರೆ, ಶಿರಿಶಿ, ಉಳವಿ ಜಾತ್ರೆ ಸಂಧರ್ಭಗಳಲ್ಲಿ ಬಸವನಾಡಿಸುವರು ಕಂಡು ಬರುತ್ತಾರೆ.

**೯. ಮಂಗನಾಡಿಸುವರು**

ಅಲೆಮಾರಿ ಜನಾಂಗದವರಾದ ಇವರು ತಮ್ಮ ಹೊಟ್ಟೆ ಪಾಡಿಗಾಗಿ ಜಾತ್ರೆ-ಉರುಸು-ಸಂತೆಗಳಲ್ಲಿ ಮಂಗನಾಟ ಆಡಿಸಿ ತಮ್ಮ ಹೊಟ್ಟೆ ತುಂಬಿಕೊಳ್ಳುತ್ತಾರೆ. ಜಾತ್ರೆಗಳಲ್ಲಿ ಹೆಣ್ಣು-ಗಂಡು ಜೋಡಿ ಮಂಗಗಳಿಗೆ ಆಕರ್ಷಕ ವೇಷ-ಭೂಷಣ ಮಾಡಿ ಗಂಡ-ಹೆಂಡತಿಯ ಸೋಗು, ತಿಪ್ಪರಲಾಗ ಹಾಕಿಸುವದು ಮಾಡಿದರೆ ಒಂದು ಕೈಯ್ಯಲ್ಲಿ ಬಡಗಿ ಇನ್ನೊಂದು ಕೈಯಲ್ಲಿ ಕೋತಿಯ ಕೊರಳಿನ ಹಗ್ಗ ಇರುತ್ತದೆ. ಕೋತಿಯ ತಲೆಗೆ ಕುಲಾಯಿ ಕಟ್ಟಿರುತ್ತಾರೆ. 'ಮಂಗನಾಡಿಸುವ' ಎಂಬುದು ವೃತ್ತಿಯನ್ನಾಧರಿಸಿ ಬಂದ ಶಬ್ದವಾಗಿರಬಹುದು. ಯಲ್ಲಾಪುರದ ಗ್ರಾಮದೇವಿ ಜಾತ್ರೆ, ಮುಂಡಗೋಡ, ಶಿರಿಶಿಯ ಮಾರಿಯಮ್ಮನ ಜಾತ್ರೆಯಲ್ಲಿ, ಹಳಿಯಾಳದ ದ್ಯಾಮ್ಯವ್ವನ ಜಾತ್ರೆಗಳಲ್ಲಿ ಮಂಗನಾಡಿಸುವರು ಸಾಕಷ್ಟು ಕಂಡು ಬರುತ್ತಾರೆ.

**೧೦. ಕರಡಿ ಆಡಿಸುವರು**

ಕರಡಿ ಕುಣಿತ ಮತ್ತು ಕರಡಿ ಆಡಿಸುವಲ್ಲಿ ಎರಡು ಬಗೆಯಿದೆ.ಹಾಲಕ್ಕಿ ಸುಗ್ಗಿಯಲ್ಲಿ ಮಾನವನೇ ಕರಡಿ ವೇಷ ಹಾಕಿ ಕುಣಿದು ಜನರಿಗೆ ಮನರಂಜನೆ ನೀಡಿ ಹಣ ಪಡೆಯುತ್ತಾನೆ.ಆದರೆ ಕರಡಿ ಆಡಿಸುವರು ಜೀವಂತ ಕರಡಿ ಹಿಡಿದು ತಂದು ಕರಡಿಗಳನ್ನ ಪಳಗಿಸಿ ಜಾತ್ರೆಗಳಲ್ಲಿ ಈ ಕರಡಿ ಕುಣಿತ ಮಾಡಿಸುತ್ತಾರೆ. ಕರಡಿಗಳು ಹಿಂದಿನ ಕಾಲುಗಳ ಮೇಲೆ ನಿಂತು ಮುಂಗಾಲುಗಳನ್ನು ಮೇಲೆ ಮಾಡಿ ಕುಣಿಯುತ್ತದೆ. ಸುತ್ತ-ಮುತ್ತ ನೆರೆದ ಜನರಿಗೆ ಎರಡು ಕೈಯಿಗಳಿಂದ ನಮಸ್ಕಾರ ಮಾಡುತ್ತದೆ.ಕಾಡಿನಲ್ಲಿರುವ ಮರಿ ಕರಡಿಯನ್ನು ಹಿಡಿದು ಮುಗುದಾರ ಹಾಕಿ ಮನೆಯಲ್ಲಿಯೇ ಕುಣಿತದ ತರಬೇತಿ ಕೊಟ್ಟು ಜನರ ಮುಂದೆ ಕುಣಿಸಿ ಅವರಿಂದ ಹಣ ಪಡೆದ ಜೀವನ ನಡೆಸುತ್ತಾರೆ.ಇತ್ತಿಚೆಗೆ ಪ್ರಾಣಿ ಹಿಂಸೆ ಕಾಯಿದೆಯಿಂದ ಇದು ಕಡಿಮೆಯಾಗಿದೆ.

**೧೧. ಡೊಂಬರಾಟ**

ಜಾತ್ರೆ-ಉತ್ಸವಗಳಲ್ಲಿ ಡೊಂಬರಾಟದ, ಕಲೆಯ ಪ್ರದರ್ಶನಕ್ಕಿಂತ ಪೂರ್ವದಲ್ಲಿ ಡೋಲು ಭಾರಿಸುತ್ತ ಭಾರವಾದ ವಸ್ತುಗಳನ್ನು ಎತ್ತುವದು, ತಂತಿಯ ಮೇಲೆ ನೆಡೆಯವದು, ಹಗ್ಗ ಹಿಡಿದು ಕುಣಿಯವದು, ಕೋಲ ತುದಿಯ ಮೇಲೆ ಅಂಗಾತ ಮಲಗಿಸುವದು, ಕಬ್ಬಿಣದ ಸರಳನ್ನು ಗಂಟಲು ಭಾಗದಲ್ಲಿ ಒಳ ತೂರಿದಂತೆ ಮಾಡಿ ರಕ್ತ ಹರಿದಂತೆ ಕಾಣಿಸುವದು, ಭಾರವಾದ ವಸ್ತುಗಳನ್ನು, ಚಕ್ಕಡಿ ಗಾಡಿಯನ್ನು ಹಲ್ಲಿನಿಂದ ಜಗ್ಗುವುದು, ಇತ್ಯಾದಿ ಕಸರಸ್ತುಗಳನ್ನು ಮಾಡುವವರು. ಈ ಕಲಾ ಪ್ರದರ್ಶನಿಂದ ಮನರಂಜನೆ ಒದಗುವುದಲ್ಲದೇ ಈ ಕಲಾವಿದರೂ ಜನರ ಮೆಚ್ಚುಗೆಗೆ ಪಾತ್ರರಾಗುತ್ತಾರೆ.ಇದು ಸಹ ಈ ಅಲೇಮಾರಿ ಜನಾಂಗದವರೇ ಮಾಡುತ್ತಾರೆ.

**೧.ಕುಸ್ತಿ**

ಉತ್ತರ ಕರ್ನಾಟಕದ ಪ್ರಭಾವದಿಂದ ಬಯಲು ಸೀಮೆ ಮುಂಡಗೊಡ, ಹಳ್ಳಿಯಾಳ, ಜೊಯ್ಡ, ಉಳವಿ ಪ್ರದೇಶಗಳಲ್ಲಿ ಮತ್ತು ಮಲೆನಾಡಿನ ಶಿರಿಶಿಯ ಜಾತ್ರೆಯಲ್ಲಿ ಈ ಕಲೆಗಳನ್ನು ನೋಡಬಹುದು. ಉಳವಿಯ ಜಾತ್ರೆಯಲ್ಲಿ ಕುಸ್ತಿಗಾಗಿ ಕೊನೆಯ ಒಂದು ದಿನದ ಮೀಸಲಾಗಿಡುತ್ತಾರೆ.ಗೆದ್ದವರಿಗೆ ಬಹುಮಾನ ನೀಡುತ್ತಾರೆ. ಜಾತ್ರೆಯ ಸಂದರ್ಭದಲ್ಲಿ ಕುಸ್ತಿಗಳು ಸಾಮಾನ್ಯವಾಗಿ ಜರಗುತ್ತವೆ. ಇವು ಗ್ರಾಮೀಣ ಕ್ರೀಡೆಗಯಾಗಿದೆ. ಆದರೆ ಪ್ರಂಪಚದಲ್ಲಿ ಕುಸ್ತಿಕಲೆ ಜನಪ್ರಿಯ ಕಲೆಯಾಗಿದೆ. ಇದಕ್ಕಾ ಜಗತ್ತಿನಲ್ಲಿ ಟಿ.ವಿ ಚಾಲನಗಳು ಇವೆ. ಹಿಂದೆ ರಾಜಮಾಹಾರಾಜರ ಕಾಲದಲ್ಲಿ ಕುಸ್ತಿಗಳು ಜರುಗುತ್ತ ಬಂದಿವೆ. ನಮ್ಮ ದೇಶದಲ್ಲಿ "ಮಲ್ಲಯುದ್ಧ" ಎಂದು ಈ ಕ್ರೀಡೆಯನ್ನು ಕರೆಯುತ್ತಾರೆ. ರಾಜ-ಮಹಾರಾಜರೂ. ಆಗಿನ ಕಾಲದಲ್ಲಿ ಕುಸ್ತಿಯನ್ನು ವೀಕ್ಷಿಸುತ್ತಿದ್ದರು. "ಕ್ರಿ.ಶ. ೧೧೨೪ ರಿಂದ ೧೧೩೮ ರವರೆಗೆ ಆಳಿದ ಸೋಮೇಶ್ವರನು ರಚಿಸಿರುವ 'ಮಾನಸೋಲ್ಲಾಸ' ಕಾವ್ಯದಲ್ಲಿನ 'ಮಲ್ಲವಿನೋದ' ಭಾಗದಲ್ಲಿ ಆಗಿನ ಕಾಲದ ವ್ಯಾಯಾಮ ಶಿಕ್ಷಣ ಪದ್ಧತಿ ಹಾಗೂ ಜನರು ಕುಸ್ತಿಯ ಬಗ್ಗೆ ತಳೆದ ಅಭಿರುಚಿ, ಕೊಡುತ್ತಿದ್ದ ಪ್ರೋತ್ಸಾಹವನ್ನು ವರ್ಣಿಸಲಾಗಿದೆ" [೯] ಈ ಕುಸ್ತಿ ಕಲೆ ಇದೇ ರೀತಿ 'ವಿಜಯ ನಗರದ ಅರಸನಾದ ಶ್ರೀ ಕೃಷ್ಣದೇವರಾಯ ಕ್ರಿ.ಶ. ೧೫೦೯ ರಿಂದ ೧೫೩೧ ರಲ್ಲಿ ಸ್ವತಃ ದಿನಬಿಡದೇ ವ್ಯಾಯಾಮ ಮಾಡುವದಲ್ಲದೇ, ಮಲ್ಲಯುದ್ಧ ಪ್ರವೀಣರನ್ನು ಪ್ರೋತ್ಸಾಹಿಸುತ್ತಿದ್ದರು. ಇವರ ಆಳ್ವಿಕೆಯಲ್ಲಿ ಈ ಕಲೆಯಲ್ಲಿ

ಗಂಡಸರಲ್ಲದೇ, ಹೆಂಗಸರು ಭಾಗವಹಿಸುತ್ತಿದ್ದರೆಂದು ತಿಳಿದು ಬರುತ್ತದೆ.'೧೦ ಈ ಜಿಲ್ಲೆಯ ಜಾತ್ರಾ ಮಹೋತ್ಸವದಂತಹ ಸಂದರ್ಭದಲ್ಲಿ ಹೆಚ್ಚು ಚೆಚ್ಚಾಗಿ ಈ ಕಲೆ ಕಂಡು ಬರುತ್ತದೆ. ಇತ್ತಿಚೆಗೆ ಬೇರೆ ಬೇರೆ ಊರುಗಳಲ್ಲಿ ಕುಸ್ತಿಪಟ್ಟುಗಳನ್ನು ಜಾತ್ರೆಯ ಸಮಯದಲ್ಲಿ ಕರೆಯುತ್ತಾರೆ.

**೨. ಭಾರ ಎತ್ತುವುದು**

ಕುಸ್ತಿಯಂತೆ ಉತ್ತರ ಕರ್ನಾಟಕದ ಪ್ರಭಾವದಿಂದ ನಮ್ಮಲ್ಲಿ ಬಳಕೆಯಲ್ಲಿರುವ ಗ್ರಾಮೀಣ ಕಲೆಯಾಗಿದ್ದು ಹಳಿಯಾಳ, ಮುಂಡಗೋಡಗಳಲ್ಲಿ ಜಾತ್ರೆಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಈ ಕಲೆ ಕಂಡು ಬರುತ್ತದೆ. "ಜಾತ್ರೆಗಳಲ್ಲಿ ಮನರಂಜನೆಗಿಂತ ಭಿನ್ನವಾದ ಇತರ ಕೆಲವು ಪ್ರದರ್ಶನಗಳು ಕೆಲವೆಡೆ ನಡೆಯುತ್ತವೆ. ಅವುಗಳ ಮುಖ್ಯಗುರಿ ಶಕ್ತಿ ಪ್ರದರ್ಶನ. ನಮ್ಮ ಜನಪದರು ಎಷ್ಟು ಬಲಶಾಲಿಗಳಾಗಿದ್ದರು ಮತ್ತು ವಿವಿಧ ಬಗೆಯ ಶಕ್ತಿ ಸಾಧನೆ ಹೊಂದಿದ್ದರು ಎನ್ನುವುದಕ್ಕೆ ಇವು ನಿದರ್ಶನ. ಭಾರಿ ಗಾತ್ರದ ಕಲ್ಲು-ಗುಂಡುಗಳನ್ನು ಅನಾಮತ್ತಾಗಿ ಮೇಲೆತ್ತಿ ಹೆಗಲ ಮೇಲಿನಿಂದ ಕೆಳಗೆ ಒಗೆಯುವದು. ಸಂಗ್ರಾಣಿ ಕಲ್ಲನ್ನು ಒಂದೇ ಕೈಯಿಂದ ಮೇಲೆತ್ತಿ ಹಿಡಿಯುವದು ಹಳೇ ಬಂಡಿಯ ಕಬ್ಬಿಣದ ಇರುಸು, ಇರುಸು ಕಟ್ಟುಗಳನ್ನು ಮೇಲೆತ್ತುವದು, ಭಾರಿ ಗಾತ್ರದ ತುಂಬಿದ ಕೊಡಗಳನ್ನು ಎತ್ತುವದು ಅಥವಾ ಮುಂದೆಲೆ ಕೂದಲು ಕೊಡದ ಉಕ್ಕಡಕ್ಕೆ ಕಟ್ಟಿ ಮೇಲೆತ್ತುವದು. ಹೀಗೆ ಹತ್ತಾರು ಬಗೆಯ ಶಕ್ತಿ, ಶೌರ್ಯ ಪ್ರದರ್ಶನಗಳನ್ನು ನಮ್ಮ ಜನಪದರು ಶಕ್ತಿ ಸಾಮರ್ಥ್ಯಗಳ ಅದ್ಭುತ ಸಾಧನೆಗೆ ಸಾಕ್ಷಿಗಳಾಗಿರುತ್ತವೆ"೧೧ ಈ ರೀತಿ ಸಾಮನ್ಯವಾಗಿ ಮುಂಡಗೂಡಿನ ಗ್ರಾಮದೇವಿ ಜಾತ್ರೆ, ಹಳ್ಳಿಯಳದ ದುರ್ಗಾಮ್ಮನ ಕಾಳಮ್ಮನ ಮತ್ತು ಮಾರಿಯಮ್ಮನ ಜಾತ್ರೆ-ಉತ್ಸವಗಳ ಸಂದರ್ಭದಲ್ಲಿ ಈ ಭಾರ ಎತ್ತುವ ಕಲಾಪ್ರದರ್ಶನವು ಜಿಲ್ಲೆಯ ಜಾತ್ರೆಗಳಲ್ಲಿ ಕಾಣುತ್ತೇವೆ.

**೩. ಕಬಡ್ಡಿ, ವ್ಹಾಲಿಬಾಲ್ ಮತ್ತು ಸೈಕಲ್‌ಗಳ ಸ್ಪರ್ಧೆ**

ಶಾಲೆಯ ಪಠ್ಯತೇರ ಚಟುವಟಿಕೆಗಳಾದ ಈ ಕಲೆಗಳು ಇತ್ತಿಚೆಗೆ ಜಾತ್ರೆ ಉರುಸು-ಉತ್ಸವಗಳಲ್ಲಿ ಜನಪದರ ಕಲೆಗಳ ಮಧ್ಯ ಕೆಲವೊಂದು ಹೊಸ ಕಲೆಗಳಾಗಿ ಸ್ಪರ್ಧಾತ್ಮಕವಾಗಿ ತೀವ್ರಗತಿಯಲ್ಲಿ ಮುನ್ನಡೆಯುವದು ಕಾಣುತ್ತೇವೆ. ಇವುಗಳಲ್ಲಿ ಕಬಡ್ಡಿ, ವ್ಹಾಲೀಬಾಲ್, ಸೈಕಲ್ ಸ್ಪರ್ಧೆಗಳು ಮುಖ್ಯವಾಗಿದೆ. ಊರಿನ ಪ್ರಮುಖರು ಯುವಕ ಮಂಡಳದ ಸದ್ಯಸರು ಈ ಕಲೆಗಳನ್ನು ಏರ್ಪಡಿಸುತ್ತಾರೆ. ಯುವಕರಲ್ಲಿ ಸ್ಪರ್ಧಾತ್ಮಕ ಮನೋಭಾವನೆ ವೃದ್ಧಿಸುವಲ್ಲಿ ಶಾಲಾಕಾಲೇಜು ವಿದ್ಯಾರ್ಥಿಗಳಿಗೆ ಒಂದು ಪಠ್ಯತೇರ ಚಟುವಟಿಕೆಯಾಗಿರುವ ಈ ಕ್ರೀಡೆಗಳು ಇಂದು ಗ್ರಾಮೀಣ ಮತ್ತು ನಗರ ಎರಡು ಪ್ರದೇಶಗಳಲ್ಲಿ ಗ್ರಾಮೀಣ ಜಾತ್ರೆಗಳ ಸಂದರ್ಭದಲ್ಲಿ, ಇತ್ತಿಚೆಗೆ ಕಬಡ್ಡಿ, ವ್ಹಾಲಿಬಾಲ್ ಮತ್ತು ಸೈಕಲ್‌ಗಳ ಸ್ಪರ್ಧೆಗಳ ಏರ್ಪಡಿಸುವಿಕೆ ಕಂಡು ಬರುತ್ತದೆ. ಈ ಸ್ಪರ್ಧೆಗಳಲ್ಲಿ ಪಾಲ್ಗೊಳ್ಳಲು ಬೇರೆ ಬೇರೆ ಊರಿನ ತಂಡಗಳು ಆಗಮಿಸಿ ತಮ್ಮ ಹೆಸರನ್ನು ನೋಂದಾಯಿಸಿ ಸ್ಪರ್ಧೆಯಲ್ಲಿ ಭಾಗವಹಿಸುತ್ತಾರೆ. ಇವರಿಗೆ ಊಟ-ಉಪಚಾರಗಳ ವ್ಯವಸ್ಥೆಯನ್ನು ಮಾಡಲಾಗುತ್ತದೆ ಜಯಶಾಲಿಯಾದ ತಂಡಕ್ಕೆ ಅನುಕ್ರಮವಾಗಿ ಪ್ರಥಮ, ದ್ವಿತೀಯ, ತೃತೀಯ ಮತ್ತು ಸಮಾಧಾನಕರ ಬಹುಮಾನ ನೀಡಲಾಗುತ್ತದೆ. ಜಾತ್ರೆಗಳಲ್ಲಿ ವಾಲಿಬಾಲ್, ಸೈಕಲ್‌ಸ್ಪರ್ಧೆ, ಕಬಡ್ಡಿ ಸ್ಪರ್ಧೆಗಳು ಪ್ರೇಕ್ಷಕರಿಗೆ ಮನರಂಜನೆ ಒದಗಿಸುತ್ತದೆ. ಈ ಜಿಲ್ಲೆಯ ಕರಾವಳಿ ತಾಲೂಕಿನ ಬಹುತೇಕ ಉತ್ಸವಗಳಲ್ಲಿ ಈ ಕಲೆ ಕಂಡು ಬರುತ್ತದೆ.

**೪. ರಂಗೋಲಿ**

ಹಿಂದೂ ಸಂಸ್ಕೃತಿಯಲ್ಲಿ ರಂಗೋಲಿಯನ್ನು ದಿನನಿತ್ಯ ಮನೆ ಮುಂದೆ ಮುಂಜಾನೆ ರಂಗವಲಿ ಹಾಕುವದು ಅಥವಾ ಶುಭ ಕಾರ್ಯಗಳಲ್ಲಿ ರಂಗೋಲಿ ಹಾಕುವದು ದೈವರಾಧನೆ ಸಂದರ್ಭದಲ್ಲಿ ರಂಗೋಲಿ ಹಾಕುವದ್ದನ್ನು ನೋಡುತ್ತವೆ. "ರಂಗೋಲಿ ಒಂದು ಜನಪದ ಕಲೆ. ಹಿಂದೂ ಸಂಸ್ಕೃತಿಯ ಒಂದು ಆದರ್ಶ ಕಲೆ ಮಾತ್ರವಲ್ಲದೇ ಸ್ತ್ರೀಯರ ಅಚ್ಚುಮೆಚ್ಚಿನ ಕಲೆಯಾಗಿದೆ.. ಸಾಮಾನ್ಯವಾಗಿ ಸ್ತ್ರೀಯರಿಗೆ ಮೀಸಲಾಗಿರುವ ಹವ್ಯಾಸ ಮಾತ್ರವಲ್ಲ. ಧಾರ್ಮಿಕ ವಾತಾವರಣದಲ್ಲಿ ಬೆಳೆದು ಬಂದ ಉತ್ಕೃಷ್ಟ ಕಲೆಯೂ ಆಗಿದೆ.ಧಾರ್ಮಿಕ ಆಚರಣೆಗಳೂ, ರಂಗೋಲಿ ಕಲೆಗೂ ಒಂದು ರೀತಿಯ ನಿಕಟ ಸಂಬಂಧವಿದೆ"೧೨ ರಂಗವಲ್ಲಿ ಕಲೆಗೆ, ರಂಗವಲಿ, ರಂಗವಾಲಿ, ರಂಗಾವಳಿ ರಂಗೋಲಿ ಎಂದು ಕರೆಯುವುದಿದೆ. ಈ ರೂಪಗಳಿಗೆ ಹೊರತಾಗಿ ರಂಗ ರೇಖವಲಿ, ಪೂವಲಿ, ಕಡೆಯ, ಧೂಳಿಚಿತ್ರ, ಕ್ಷಣಿಕ ಚಿತ್ರ ಎಂಬ ಪರ್ಯಾಯ ಪದಗಳೂ ಇವೆ. ಹಾಲಕ್ಕಿಗಳು ರಂಗೋಲಿ ಬರೆಯುವುದಕ್ಕೆ 'ಹುಲಿ ಹೊಯ್ಯುವುದು' 'ಸೇಡಿ ಬರೆಯುವುದು' ಎಂದು ಹೇಳುತ್ತಾರೆ. ಕಾರವಾರದ ಮಾರುತಿಗಲ್ಲಿಯಲ್ಲಿ ರಂಗವಲ್ಲಿ ಜಾತ್ರೆ ನೆಡಯುತ್ತದೆ. ಈ ಮೊದಲು ವಿವರಿಸಿಯಿರುವ ಆರಾಧನೆಯ ಕಲೆಗಳು ಇನ್ನಿತರ ಕಲೆಗಳು ಎಷ್ಟು ಕಣ್ಮರೆಯಾಗಿವೆ. ಜಾತ್ರೋತ್ಸವಗಳಲ್ಲಿ ಜನರಿಗೆ ಮನರಂಜನೆಯನು ನೀಡುವಗೋಸ್ಕರ ಪ್ರದರ್ಶನವಾಗಿರುತ್ತವೆ. ಆದರೆ ಧಾರ್ಮಿಕ ಆರಾಧಾನೆಯ ಕಲೆಗಳು ಜಾತ್ರೋತ್ಸವಗಳಲ್ಲಿ ಸಂಪ್ರದಾಯ ಆಚರಣೆಯ ಒಂದು ಭಾಗವಾಗಿ ಆರಾಧನೆಗೆ ಒಳಪಟ್ಟಿವೆ.

**ಅಡಿ ಟಿಪ್ಪಣೆ**

1. ಪ್ರೊ.ಟಿ.ಕೇಶವಭಟ್ಟ (ಸಂ) ಯಕ್ಷಗಾನ ಕಲಾದರ್ಶನಪುಟ-೧
2. ಅದೇಪುಟ-೧
3. ಕ್ಷೇತ್ರ ಕಾರ್ಯ ಮಾಹಿತಿ ಅಂಕೋಲಾ ವೆಂಕಟ್ರಮಣ ರಥೋತ್ಸವ ಸಂದರ್ಭ,ದಿನಾಂಕ ೧೮ ಎಪ್ರೀಲ್೨೦೨೪
4. ಜಾನಪದ ಸಾಹಿತ್ಯ ದರ್ಶನ ಭಾಗ-೩,ಪುಟ-೪೩
5. ಹಿ.ಚಿ.ಬೋರಲಿಂಗಯ್ಯ(ಸಂ)ಕರ್ನಾಟಕ ಜನಪದ ಕಲೆಗಳ ಕೋಶ,ಪುಟ-೨೨೮-೨೨೯
6. ೬.ಹಿ.ಚಿ.ಬೋರಲಿಂಗಯ್ಯ(ಸಂ)ಕರ್ನಾಟಕ ಜನಪದ ಕಲೆಗಳ ಕೋಶ,ಪುಟ-೨೨೮-೨೨೯
7. ಮಾಹಿತಿ-ಸುರೇಶ ವರ್ಣಕರೇ.ವಯಸ್ಸು-೫೫,ಜಾತಿ-ದೈವಜ್ಞ ಬ್ರಾಹ್ಮಣ,ಅಂಚೆ-ಅಲಗೇರಿ,ಅಂಕೋಲಾ, ಕ್ಷೇತ್ರ ಕಾರ್ಯ, ನಾಮದಾರಿ ದಹಿಂಕಾಲಉತ್ಸವ,ದಿನಾಂಕ ೨೨ ಜನವರಿ ೨೦೨೩
8. ೮.ಡಾ.ಎಸ್.ಎಂ.ವೃಷಭೇಂದ್ರ ಸ್ವಾಮಿ(ಸಂ),ಜಾನಪದ ಸಾಹಿತ್ಯ ದರ್ಶನ, ಭಾಗ-೧೪, ಪುಟ-೧೩೬
9. ೯.ಟಿ.ಆರ್.ಸ್ವಾಮಿ(ಸಂ) ಕುಸ್ತಿ-ಪುಟ-೧೦,೦೪,೨೪
10. ೧೦.ಟಿ.ಆರ್.ಸ್ವಾಮಿ(ಸಂ) ಕುಸ್ತಿ-ಪುಟ-೧೫
11. ೧೧.ಸಿ.ಎಸ್.ಕುಮಾರ ಸ್ವಾಮಿ,ಕರ್ನಾಟಕ ಜಾತ್ರೆಗಳು-ಪುಟ-೬೫. ೧೨.. ಸಿ.ಎಸ್.ಕುಮಾರ ಸ್ವಾಮಿ,ಕರ್ನಾಟಕ ಜಾತ್ರೆಗಳು-ಪುಟ೦೦